ಮೈಸೂರು ಚೀಫ್ ಕೋರ್ಟನಲ್ಲಿ.

ಸಿವಿಲ್ ತರಫ್.

ರೂಲ್ ಆಫ್ ಪ್ರಾಕ್ಟಿಸ್ ಎಂಬ ಆಚರಣಾ ನಿಬಂಧನೆ ನಂ|| 78.

ಸ್ಯ 1889ನೇ ಈಸವಿ ನೋವೆಂಬರ್ ತಾ|| 19ರಲ್ಲು.

ಕೂಡಲೆ ನೋಡಿಕೊಳ್ಳುವಂತೆ ಈ ಕೆಳಗೆ ಅಚ್ಚು ಮಾಡಿರತಕ್ಕ 1870ನೇ ಈಸವಿ ಜುಲೈ 23ನೇ ತಾರೀಖಿನ ಜುಡಿಷಲ್ ಕಮಿಷನರವರ ಸರ್ಕ್ಯುಲರ್ ಎಂಬ $\frac{760}{33}$ ನೇ ನಂ|| ಒಟ್ಟು ಹುಕ್ಕುಮನ್ನು ಸೂಚಿಸಿ, ಚೀಫ್ ಕೋರ್ಟನವರು ಆಜ್ಞಾಪಿಸಿರುವುದೇನೆಂದರೆ:—

ಕೋರ್ಟು ಫೀಸ್ ಆಕ್ಟು 7ನೇ ಪ್ರಕರಣದ 5ನೇ ಕ್ಲಾಜಿನ ಪ್ರಕಾರ ಅಪೇಕ್ಷಿತವಾಗಿರತಕ್ಕ ಅಂಕಗಳಲ್ಲಿ, ಕೆಳ ಕೋರ್ಟನವರೆಲ್ಲರೂ ಆ ಹುಕ್ಕುಮಿನಲ್ಲಿ ನಿರೂಪಣೆಯಾಗಿರುವ ಕ್ರಮಗಳನ್ನು ಖಂಡಿತವಾಗಿ ಅನುಸರಿಸತಕ್ಕದ್ದು.

2. ಎಲ್ಲಾ ಕೋರ್ಟುಗಳಿಗೂ ಅಚ್ಚು ಮಾಡಿದ ನಮೂನೆಗಳು ಬದಗಿಸಿ ಕೊಡಲ್ಪಡುವವು. ಹಾಗೆ ಅಚ್ಚು ಮಾಡಿದ ನಮೂನೆಯನ್ನು ಕ್ರಮವರಿತು ಪ್ರತಿಯಾಗಿ ಬರೆದು ಜಂಟಿಸಿ ಹಾಜರು ಮಾಡಿದಹೊರತು, ಸ್ಥಿರ ಸ್ವತ್ತಿಗೆ ಸಂಬಂಧಿಸಿದ ದಾವಾ ಆಗಲಿ, ಅಪ್ಪೀಲಾಗಲಿ ಯಾವದನ್ನೂ ಹಿಡಿಯಕೂಡದು.

3. ಮೇಲೆಕಂಡ ಸರ್ಕ್ಯೂಲರಿನ 2ನೇ ಪ್ಯಾರಾ ರೀತ್ಯಾ ಆಚರಣೆಗೆ ತರುವ ಭಾಗದಲ್ಲಿ ಪ್ರತಿ ಕೋರ್ಟನ ಕಚೇರಿಮೇಲು ವಿಚಾರಣೆ ಕರ್ತರಾದ ಅಧಿಕಾರಿಗಳು ಜವಾಬ್ದಾರರಾಗಿರತಕ್ಕದ್ದು.

ಕೋರ್ಟಿನಿಂದ

ಎಸ್. ಆರ್. ಸುಬ್ಬರಾಯರ್,

ರಿಜಿಸ್ಟ್ರಾರ್.

ಜುಡಿಷಲ್ ಕಮಿಷನರವರ ಸ್ಯ 1870ನೇ ಈಸವಿ ಜುಲೈ 23ನೇ ತಾರೀಖಿನ 760—33ನೇ ನಂ|| ಸರ್ಕ್ಯೂಲರೆಂಬ ಒಟ್ಟು ಹುಕುಂ:—

ಸ್ಯ 1870ನೇ ಈಸವಿ 7ನೇ ನಂ|| ಆಕ್ಟುಎಂಬ ಕೋರ್ಟು ಫೀಸ್ ಆಕ್ಟಿನ ವಿಷಯದಲ್ಲಿ, ಈ ಕೆಳಗಿನ ನಿಬಂಧನೆಗಳು ಮೈಸೂರು ಸೀಮೆಯ ಕೋರ್ಟುಗಳ ತಿಳುವಳಿಕೇಬಗ್ಗೆಪ್ರಕಟಿಸಿವೆ; ಭೂಮಿ, ಮನೆ, ತೋಟ, ಇವುಗಳ ಸ್ವಾಧೀನಕ್ಕಾಗಿ ಬರುವ ದಾವಾಗಳಲ್ಲಿ ತೆರಬೇಕಾದ ಸ್ಟ್ಯಾಂಪು ಕಿಮ್ಮತ್ತನ್ನು ಲೆಕ್ಕ ಮಾಡುವಾಗ್ಗೆ ಈ ಸೀಮೆಯ ಕೋರ್ಟಿನವರು ಈ ಕೆಳಗಿನ ನಿಬಂಧನೆಗಳನ್ನು ಆಚರಣೆಗೆ ತರಬೇಕು:—

ಕೋರ್ಟು ಫೀಸ್ ಆಕ್ಟು 7ನೇ ಪ್ರಕರಣದ 5ನೇ ಕ್ಲಾಜಿನ ಪ್ರಕಾರ ಅಪೇಕ್ಷಿತವಾದ ಅಂಕಗಳನ್ನು ಕುರಿತು ಕೊಡಲ್ಪಟ್ಟ ಆಚರಣ ಕ್ರಮಗಳು.

1. ಸ್ಥಿರ ಸ್ವತ್ತಿಗೆ ಸಂಬಂಧಿಸಿದ ಅಸಲ್ ಮೊಕದ್ದಮೆಯಲ್ಲಿ ದಾವಾ ದಾಖಲ್ ಮಾಡತಕ್ಕ ಪ್ರತಿಯೊಬ್ಬ ಪ್ಲೀಡರು ಅಥವಾ ಕಕ್ಷಿಗಾರನು ಕೋರ್ಟಿನ ಕಚೇರಿಮೇಲು ವಿಚಾರಣೆಕರ್ತರಾದ ಮುಖ್ಯಾಧಿಕಾರಿಗಳಂದ ಈ ಕೆಳಗಿನ ನಮೂನೆ ಕಾಗದವನ್ನು ತೆಗೆದುಕೊಂಡು ಅಯಾ ಪೆಡ್ಡಿನಲ್ಲಿ ತಪಸೀಲುಗಳನ್ನು ಭರ್ತಿಮಾಡಿ ದಾವಾಕ್ಕೆ ಲಗತ್ತು ಮಾಡತಕ್ಕದ್ದು.

2. ಹೀಗೆ ಅಸ್ತಿಯ ತಪಸೀಲನ್ನು ಲೇಖಿಸಿರತಕ್ಕ ಕಾಗದವು ಕಚೇರಿಮೇಲು ವಿಚಾರಣಕರ್ತರಾದ ಅಧಿಕಾರಿಗಳಂದ ಸರಿಯೆಂದಿಗಿದೆಎಂದು ಸರ್ಟಿಫೈಆಗಿ, ತರುವಾಯ, ಅಪ್ಪೀಲ್ಮಾಡುವ ಉದ್ದಿಶ್ಯ ಕಕ್ಷಿಗಾರನಿಗೆ ಕೊಡತಕ್ಕ ಪ್ರತಿ ಡಿಕ್ರೀ ಕಾಪಿಗೂ ಲಗತ್ತು ಆಗತಕ್ಕದ್ದು.

3. ಸ್ಯ 1870ನೇ ಈಸವಿ ಸೆಪ್ಟೆಂಬರು 1ನೇ ತಾರೀಖಿನಲ್ಲಿ ಮತ್ತು ಆ ತರುವಾಯ, 1—2ನೇ ನಿಬಂಧನೆಗಳಮೇರೆಗೆ ಅಪೇಕ್ಷಿತಗಳಾಗಿರುವ ಅಂಕಗಳು ಇಲ್ಲದ ಹೊರತು, ದಾವಾಆಗಲಿ ಅಪ್ಪೀಲರ್ಜಿಯಾಗಲಿ ಈ ಯಾವದನ್ನೂ ಯಾವಕೋರ್ಟಿನಲ್ಲಿಯೂ ಹಿಡಿಯಕೂಡದು. ಈ ತಪಸೀಲು ಇಲ್ಲದಿದ್ದಪಕ್ಷದಲ್ಲಿ, ಅಂಥಾ ದಾವಾ ಅಥವಾ ಅಪ್ಪೀಲರ್ಜಿಯನ್ನು ಸುಮ್ಮನೆ ತೆಗೆದುಕೊಳ್ಳಬಹುದೇ ಹೊರತು, ಪ್ಲೀಡರಾಗಲಿ ಕಕ್ಷಿಗಾರನಾಗಲಿ ಆ ತಪಸೀಲನ್ನು ತಂದು ಕೊಡುವತನಕ ದಾಖಲ್ಮಾಡಿಕೊಳ್ಳತಕ್ಕದ್ದಿಲ್ಲ.